ನಿರ್ಮಿಸಲು ಒಂದು ಯೋಜನೆಯನ್ನು ಹಾಕಿಕೊಂಡಿದೆ. ಬೀಡಿ ಉದ್ದಿಮೆಯ ಕೆಲಸಗಾರರಿಗಾಗಿ ಗುಲ್ಬರ್ಗಾ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ಸಹಕಾರ ಸಂಘಗಳನ್ನು ಸ್ಥಾಪಿಸುವ ಯೋಜನೆಯನ್ನು ಸಿದ್ಧಪಡಿಸಿದೆ.

ಇ) ಹೌದು. ಡಚ್ ಸರ್ಕಾರದ ಸಾಲದ ಯೋಜನೆಯ ಮೇರೆಗೆ ಗದಗ—ರಾಣಿಬೆನ್ನೂರುಗಳಲ್ಲಿ ಹಾಕಿಕೊಂಡಿರುವ ಯೋಜನೆಗಳಂತೆಯೇ ಅಲಂದ ತಾಲ್ಲೂಕಿನಲ್ಲಿಯೂ ಯೋಜನೆಗಳನ್ನು ಹಾಕಿಕೊಂಡಿದೆ.

ಶ್ರೀ ಬಿ.ಆರ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದ ಪ್ರಕಾರ ಸುಮಾರು 75 ಮನೆಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಈಗ ಮಂಜೂರಾಗಿರತಕ್ಕಂಥ ಮನೆಗಳನ್ನು ಹಿಂದೆ ಅಂದಾಜು ಮಾಡಿದ ಪ್ರಕಾರ ಕಟ್ಟಿ ಕೊಡಲಾಗುತ್ತದೆಯೇ ಅಥವಾ ಈಗಿನ ಅಂದಾಜು ಪ್ರಕಾರ ಎಸ್ಟಿಮೇಟ್ ಮಾಡಿಸಿ ಕಟ್ಟಿಸಿಕೊಡಲಾಗುತ್ತಯೇ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.— ಸ್ವಾಮಿ, ರಿವೈಸ್ಡ್ ಎಸ್ಟಿಮೇಟ್ ಮಾಡಿ ಕಟ್ಟಿಸಿ ಕೊಡಲಾಗುತ್ತದೆ.

ವಿಷಯ : ಹಾರಂಗಿ ಯೋಜನೆಯ ಮೊದಲನೆ ಹಂತ

ಪ್ರಶ್ನೆ : 154 (64) ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) — ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹಾರಂಗಿ ಮೊದಲನೇ ಹಂತದ ಯೋಜನೆಯ ಸಮೀಕ್ಷಾ ಕೆಲಸ ಮುಗಿದಿದೆಯೇ ;

ಆ) ಹಾಗಿದ್ದಲ್ಲಿ ಯಾವಾಗ ಈ ಕೆಲಸವನ್ನು ಪ್ರಾರಂಭಿಸುತ್ತೀರಿ ಮತ್ತು ಯಾವ ವರ್ಷದಲ್ಲಿ ಮುಕ್ತಾಯಗೊಳಿಸುತ್ತೀರಿ ;

ಇ) ಈ ಯೋಜನೆಯಿಂದ ಪಿರಿಯಾಪಟ್ಟಣ, ಹುಣಸೂರು ಮತ್ತು ಕೆ ಆರ್. ನಗರ ತಾಲ್ಲೂಕುಗಳಿಗೆ ಎಷ್ಟು ಎಕರೆ ಆಚ್ಚುಕಟ್ಟಿಗೆ ಬರುತ್ತದೆ ; ಹಾಗೂ ಎಷ್ಟು ಹಣ ವೆಚ್ಚವಾಗುತ್ತದೆ ?

ಉತ್ತರ : ಶ್ರೀ ಹೆಚ್.ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಅ) ಹಾರಂಗಿ ಯೋಜನೆಯಲ್ಲಿ ಹಂತಗಳಾವುವೂ ಇಲ್ಲ. ಈ ಯೋಜನೆಯ ಅಂಗವಾದ ಪಿರಿಯಾಪಟ್ಟಣ ಏತ ನೀರಾವರಿ ನಾಲೆಯ ಸಮೀಕ್ಷೆ ಕೆಲಸ ಪ್ರಗತಿಯಲ್ಲಿದೆ.

ಆ) ಕೂಲಂಕುಷ ಸಮೀಕ್ಷೆ ಪೂರ್ಣಗೊಂಡ ನಂತರ ಮತ್ತು ಈ ಯೋಜನೆಗೆ ಸರ್ಕಾರದ ಅನುಮೋದನೆ ನೀಡಿದ ನಂತರ ಪ್ರಾರಂಭ ಮಾಡಲಾಗುವುದು.

ಇ) ಈ ಏತ ನಾಲೆಯ ಮೊದಲನೆ ಹಂತದಲ್ಲಿ ಪಿರಿಯಾಪಟ್ಟಣದಲ್ಲಿ 18,000 ಎಕರೆಗಳಷ್ಟು ಮತ್ತು ಹುಣಸೂರಿನಲ್ಲಿ 12,000 ಎಕರೆಗಳನ್ನು ಒಳಪಡಿಸಬಹುದು. ಇದರ ಪೂರ್ವಭಾವಿ ಅಂದಾಜು 1040 ಲಕ್ಷ ರೂಪಾಯಿಗಳು.

ಶ್ರೀ ಕೆ.ಎಸ್. ಕಾಳಮರಿಗೌಡ.— ಮಾನ್ಯ ಅಧ್ಯಕ್ಷರೇ, ಈ ಯೋಜನೆ ಕಾರ್ಯಗತವಾಗಬೇಕಾದರೆ ಮೊದಲು ಸರ್ವೆಯಾಗಬೇಕು. ಆ ಸರ್ವೆಯಾದಂಥ ವರದಿ ಸರ್ಕಾರಕ್ಕೆ ಬರಬೇಕು. ಇದರಂತೆ ಸರ್ವೆಯಾಗಿರತಕ್ಕಂಥ ವರದಿ ಏನಾದರೂ ಸರ್ಕಾರಕ್ಕೆ ಬಂದಿದೆಯೇ ? ಮತ್ತೆ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಹಾರಂಗಿ ಯೋಜನೆಯ ಡ್ಯಾಮ್ ಕೆಲಸ ಮುಗಿದಿದೆ. ಆದರೆ ಜೊತೆಯಲ್ಲಿಯೇ ಈಗ ಫ್ಲೋ ಇರಿಗೇಷನ್ ಕೆಲಸ ಕೂಡ ತೆಗೆದುಕೊಂಡಿದ್ದಾರೆ. ಈ ಕೆಲಸವನ್ನು ಇನ್ನು ಒಂದು ವರ್ಷದಲ್ಲಿ ಮುಗಿಸಬಹುದು. ಈ ಫ್ಲೋ ಇರಿಗೇಷನ್ ಕೆಲಸ ಮುಗಿದ ತಕ್ಷಣ ಲಿಫ್ಟ್ ಇರಿಗೇಷನ್ ಕೆಲಸವನ್ನು ಸಹ ತೆಗೆದುಕೊಳ್ಳುತ್ತಾರೆಯೇ ? ಈ ಲಿಫ್ಟ್ ಇರಿಗೇಷನ್ ಕೆಲಸವನ್ನು ತೆಗೆದುಕೊಳ್ಳುವುದರಿಂದ ಮದ್ರಾಸ್ ರಾಜ್ಯಕ್ಕೂ ಕೂಡ ತಾವು ನೀರನ್ನು ಒದಗಿಸಿಕೊಡಬಹುದು. ಆದ್ದರಿಂದ ತಾವು ಈ ಲಿಫ್ಟ್ ಇರಿಗೇಷನ್ ಕೆಲಸವನ್ನು ಸಹ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ, ಫ್ಲೋ ಇರಿಗೇಷತ್ ಕೆಲಸ ಕಂಪ್ಲೀಟ್ ಮಾಡಬೇಕಾದರೆ ಒಟ್ಟು 85 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ 56 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ 29 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. 29 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳಬೇಕಾದರೆ ಸಂಪನ್ಮೂಲಗಳ ಕೊರತೆ ಇದೆ ಎನ್ನುವುದು ತಮಗೂ ಗೊತ್ತಿದೆ. ಸರ್ಕಾರ ಈ ಬಗ್ಗೆ ಆಸಕ್ತಿ ವಹಿಸಿ ಮೊದಲು 29 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡು ಫ್ಲೋ ಇರಿಗೇಷನ್ ಕೆಲಸ ಮುಗಿಸಿದ ಮೇಲೆ ಆ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಈಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ.

ವಿಷಯ : ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರ್ಕಾರಿ ಅರಣ್ಯದ ಲೂಟಿ

ಪ್ರಶ್ನೆ. 155(343) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಪ್ರತಿನಿತ್ಯ ಸರ್ಕಾರಿ ಅರಣ್ಯದ ಲೂಟಿ ನಡೆಯುತ್ತಿದ್ದರೂ ಅದನ್ನು ತಡೆಗಟ್ಟಲು ಅರಣ್ಯ ಇಲಾಖೆಯವರು ವಿಫಲರಾಗಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರಕಾರಿ ಅರಣ್ಯದ ಲೂಟಿ ಪ್ರತಿನಿತ್ಯ ನಡೆಯುತ್ತಿದ್ದು ಈ ಬಗ್ಗೆ ಅರಣ್ಯ ಇಲಾಖೆ ಎಷ್ಟು ಅರಣ್ಯಗಳ್ಳರ ಮೇಲೆ ಪ್ರಕರಣಗಳನ್ನು ದಾಖಲ್ಮಾಡಿಕೊಂಡಿದೆ ;

ಇ) ಈ ಸರಕಾರ ಅರಣ್ಯ ದರೋಡೆಯನ್ನು ತಡೆಗಟ್ಟಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಉತ್ತರ : ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು) — ಅ) ಅರಣ್ಯ ಲೂಟಿಯನ್ನು ತಡೆಗಟ್ಟಲು ಅರಣ್ಯ ಇಲಾಖೆಯು ವಿಫಲವಾಗಿಲ್ಲ.

ಆ) ಅರಣ್ಯ ಲೂಟಿಯನ್ನು ತಡೆಗಟ್ಟಲು ಇಲಾಖೆಯು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 1982-83ನೇ ಸಾಲಿನಲ್ಲಿ 159 ಅರಣ್ಯ ಅಪರಾಧಗಳನ್ನು ಕಂಡುಹಿಡಿದು 151 ಅಪರಾಧಿಗಳ ಮೇಲೆ ಕೇಸುಗಳನ್ನು ದಾಖಲೆ ಮಾಡಲಾಗಿದೆ ಅಂತೆಯೇ 1983-84ನೇ ಸಾಲಿನಲ್ಲಿ ಇಲ್ಲಿಯವರೆಗೆ 124 ಅರಣ್ಯ ಅಪರಾಧಗಳನ್ನು ಕಂಡುಹಿಡಿದು 117 ಅಪರಾಧಿಗಳ ಮೇಲೆ ಕೇಸು ಮಾಡಲಾಗಿದೆ.

ಇ) ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ತಡೆಗಟ್ಟಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಈ ಕೆಳಗೆ ನಮೂದಿಸಿರುವಂತಹ ಕಾಯ್ದೆ ಮತ್ತು ನಿಯಮಗಳ ವ್ಯಾಪ್ತಿಯೊಳಗೆ ಅಧಿಕಾರವನ್ನು ನೀಡಲಾಗಿದೆ ;

ಅ) ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ಕರ್ನಾಟಕ ಅರಣ್ಯ ನಿಯಮಗಳು 1969.

ಆ) ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976 ಮತ್ತು

ಇ) ವನ್ಯ ಪ್ರಾಣಿಗಳ ಸಂರಕ್ಷಣಾ ಕಾಯ್ದೆ 1972 ಮತ್ತು ನಿಯಮಗಳು 1973.

ಅರಣ್ಯ ಇಲಾಖೆಯ ಅಧಿಕೃತ ಅಧಿಕಾರಿಗಳಿಗೆ ಕಳ್ಳ ಸಾಗಾಣಿಕೆಯಲ್ಲಿ ಸಿಕ್ಕ ಅರಣ್ಯ ಉತ್ಪನ್ನ ಮತ್ತು ಕಳ್ಳ ಸಾಗಾಣಿಕೆಯಲ್ಲಿ ಬಳಸಿದಂಥ ವಾಹನಗಳು, ಪ್ರಾಣಿಗಳು ಹಾಗೂ ಉಪಕರಣಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕರ್ನಾಟಕ ಅರಣ್ಯ ಕಾಯ್ದೆಯ 71 ಎ. ಕಲಮಿನ ಪ್ರಕಾರ ಅಧಿಕಾರ ನೀಡಲಾಗಿದೆ.

ಅನಧಿಕೃತವಾಗಿ ಅರಣ್ಯದಲ್ಲಿ ಜಾಗವನ್ನು ಆಕ್ರಮಿಸಿಕೊಂಡಂತಹವರನ್ನು ಅಂತಹ ಜಾಗದಿಂದ ಉಚ್ಚಾಟಿಸಲು ಕರ್ನಾಟಕ ಅರಣ್ಯ ಕಾಯ್ದೆಯ 64 ಎ ಕಲಮಿನೊಳಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ

ಪ್ರಸ್ತುತ ಅರಣ್ಯ ಸಿಬ್ಬಂದಿಯ ಜೊತೆಗೆ ನಮ್ಮ ರಾಜ್ಯದಲ್ಲಿ ಅರಣ್ಯ ಇಲಾಖೆಯ ಒಟ್ಟು 18 ಅರಣ್ಯ ಸಂಚಾರಿ ದಳಗಳು ಕೆಲಸ ಮಾಡುತ್ತಿವೆ. ಈ ಸಂಚಾರಿ ದಳಗಳ ಮುಖ್ಯ ಕಾರ್ಯ ಅರಣ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಕಳ್ಳ ಸಾಗಾಣಿಕೆದಾರರ ಮೇಲೆ ಕಾನೂನಿನ ರೀತ್ಯ ಕ್ರಮ ಕೈಗೊಳ್ಳುವುದು. ಇದರ ಬಗ್ಗೆ ಡಿ ಐ.ಜಿ (ಸಿ.ಐ.ಡಿ. ಅರಣ್ಯ ಪೋಲೀಸ್) ವಿಭಾಗವೂ ಸಹ ಸೃಷ್ಟಿಸಲಾಗಿದೆ.

ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ದಕ್ಷತೆಯಿಂದ ತಡೆಗಟ್ಟಲು ಇಲಾಖೆಯು ತನ್ನ ಸಿಬ್ಬಂದಿಗೆ ಒಟ್ಟು ಐರಡುನೂರು ಬಂದೂಕುಗಳನ್ನು ಮತ್ತು ಅರವತ್ತಾರು ವೈರ್‌ಲೆಸ್ ಸೆಟ್‌ಗಳನ್ನು ಕೊಡಲಾಗಿದೆ.

ಶ್ರೀ ಕೆ ವಸಂತಬಂಗೇರ. — ಮಾನ್ಯ ಸಚಿವರು ಉತ್ತರ ಕೊಡುತ್ತಾ ಅರಣ್ಯ ಲೂಟಿಯನ್ನು ತಡೆಗಟ್ಟಲು ಅರಣ್ಯ ಇಲಾಖೆಯವರು ವಿಫಲವಾಗಿಲ್ಲ, ಸಫಲರಾಗಿದ್ದಾರೆಂದು ಹೇಳಿದ್ದಾರೆ. ಬಡವರು ಸ್ವಂತ ಉಪಯೋಗಕ್ಕಾಗಿ ಮರ ಕಡಿದರೆ ಅವರ ಮೇಲೆ ಅಧಿಕಾರಿಗಳು ಕೇಸು ಹಾಕುವುದರಲ್ಲಿ ಸಫಲರಾಗಿದ್ದಾರೆ. ಆದರೆ ಅರಣ್ಯವನ್ನು ಲೂಟಿ ಮಾಡತಕ್ಕ ಒಂದು ತಂಡವಿದೆ. ಅವರಿಗೆ ಹೆದರಿಕೊಂಡು ಅರಣ್ಯ ಇಲಾಖೆಯವರು ಮತ್ತು ಪೋಲೀಸ್‌ನವರು ಯಾವುದೇ ಕೇಸುಗಳನ್ನು ಹಾಕುವುದಿಲ್ಲ. ರಾಜ್ಯ ಮಟ್ಟದ ಒಂದು ಸ್ಕ್ವಾಡ್ ಕಳುಹಿಸಿ ಕೊಡಿ, ನಾನು ಎಲ್ಲೆಲ್ಲಿ ಅರಣ್ಯ ಲೂಟಿಯಾಗುತ್ತಿದೆ ಎನ್ನುವುದನ್ನು ಸ್ವತಹ ತೋರಿಸಿಕೊಡುತ್ತೇನೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಜೆ.ಡಿ. ಸೋವಪ್ಪ. — ಸ್ವಾಮಿ, ಗಂಧದ ಮರವನ್ನು ಟೌನಿನ ಪಕ್ಕದಲ್ಲೇ ಕಡಿದುಕೊಂಡು ಹೋಗಿದ್ದಾರೆ. ಅದರ ಬಗ್ಗೆ ಕಂಪ್ಲೈಂಟ್ ಕೊಟ್ಟರೆ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಬಿ.ಎ. ಜೀವಿಜಯ. — 1982-83ರಲ್ಲಿ 159 ಪ್ರಕರಣಗಳನ್ನು ಕಂಡುಹಿಡಿಯಲಾಗಿದೆ. ಅದರಲ್ಲಿ 5 ಪ್ರಕರಣಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಪತ್ತೆ ಹಚ್ಚಿದ್ದಾರೆ. 151 ಅಪರಾಧಿಗಳ ಮೇಲೆ ಕೇಸುಗಳನ್ನು ದಾಖಲೆ ಮಾಡಲಾಗಿದೆ. ಖಾಸಗಿ ಜಮೀನಿನಲ್ಲಿ, ರೆವಿನ್ಯೂ ಜಮೀನಿನಲ್ಲಿರ ತಕ್ಕ ಮರಗಳಿಗೆ ಸಂಬಂಧಪಟ್ಟದ್ದು ಬೇರೆ ಇದೆ. 1983-84ರಲ್ಲಿ ಇಲ್ಲಿಯವರೆಗೆ 124 ಪ್ರಕರಣಗಳನ್ನು ಗೊತ್ತು ಮಾಡಲಾಗಿದೆ. ಅದರಲ್ಲಿ ನಾಲ್ಕು ಪ್ರಕರಣಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳು ಪತ್ತೆ ಮಾಡಿದ್ದಾರೆ. ಮಾನ್ಯ ಸದಸ್ಯರು ನಮಗೆ ಕೇಸುಗಳನ್ನು ಹಿಡಿದುಕೊಡಲಾಗುತ್ತದೆಂದು ಹೇಳಿದ್ದಾರೆ.

ಅವರು ನಮಗೆ ನಿರ್ದಿಷ್ಟವಾಗಿ ವಿಚಿತವಾಗಿ ಇಂತಹ ಕಡೆ ಅರಣ್ಯ ಲೂಟಿ ನಡೆಯುತ್ತಿದೆ ಎಂದು ಹೇಳಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಎ. ಲಕ್ಷ್ಮೀಸಾಗರ.— ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ವಿಷಯ : ತುಂಗಾನದಿ ಏತ ನೀರಾವರಿ ಯೋಜನೆ

ಪ್ರಶ್ನೆ. 75(509) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಸವಾನಿಯ ಏತ ನೀರಾವರಿ ಯೋಜನೆಯನ್ನು ಯಾವಾಗ ಮಂಜೂರು ಮಾಡಲಾಯಿತು ?

ಆ) ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ನಿಧಾನವಾಗುವುದಕ್ಕೆ ಕಾರಣವೇನು ?

ಉತ್ತರ : ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) 1979ನೆಯ ಡಿಸೆಂಬರ್ ತಿಂಗಳಲ್ಲಿ ಮಂಜೂರು ಮಾಡಲಾಯಿತು.

ಆ) ಈ ಕಾಮಗಾರಿಯು ಪ್ರಾರಂಭವಾಗಿ ಈಗ ಮುಕ್ತಾಯ ಹಂತದಲ್ಲಿದೆ.

ವಿಷಯ : ಕಾಳೀನದಿ ಸೇತುವೆಯ ಮೇಲೆ ತಲೆಗಂದಾಯ ವಸೂಲು ಮಾಡುತ್ತಿರುವ ಬಗ್ಗೆ

ಪ್ರಶ್ನೆ. 79(208) ಶ್ರೀ ಎಂ ಜಿ. ಜರತಾರಗರ್ (ಹುಬ್ಬಳ್ಳಿ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಾರವಾರ ಹಾಗೂ ಸದಾಶಿವಗಡಗಳ ಮಧ್ಯದ ಸೇತುವೆ (ಕಾಳೀನದಿ) ದಾಟುವಾಗ್ಗೆ ತಲೆಗಂದಾಯ ವಸೂಲಿ ಮಾಡುತ್ತಿರುವುದು ನಿಜವೇ ;

ಆ) ಹಾಗಿದ್ದಲ್ಲಿ 5 ಮೈಲು ಅಂತರದಲ್ಲಿ ಬಸ್ಸಿನ ಮೂಲಕ ಹೋಗಿ ಬರುವ ಸಾವಿರಾರು ಜನರಿಗೆ ಅನ್ಯಾಯವೆಸಗಿದಂತಾಗುವುದಿಲ್ಲವೇ ;

ಇ) ಮೇಲ್ಕಂಡ ಸೇತುವೆ ದಾಟುವಾಗ ತೆತ್ತ ಶುಲ್ಕಕ್ಕೆ ರಬ್ಬರ್ ಮೊಹರು ಕೊಟ್ಟಿದ್ದ ಹಳೆಯ ಬಸ್ಸು ಟಿಕೆಟ್‌ಗಳನ್ನೇ ರಸೀದಿಯಾಗಿ ಸಾರಿಗೆ ಸಂಸ್ಥೆ ಕೊಡುತ್ತಿರುವುದು ಯಾವ ನಿಯಮದ ಮೇರೆಗೆ ಹಾಗೂ ಯಾವುದೇ ವಯಸ್ಸಿನ ಜನರಿಂದಲೂ ತಲೆಗಂದಾಯ ಕರ್ನಾಟಕದಲ್ಲಿ ವಸೂಲಿಮಾಡುವ ಪದ್ಧತಿ ಯಾವಾಗಿನಿಂದ ಪ್ರಾರಂಭಿಸಲಾಗಿದೆ.

ಈ) ಮೇಲ್ಕಂಡ ತಲೆಗಂದಾಯ ವಸೂಲಾತಿಯನ್ನು ಸರ್ಕಾರವು ಪುನರಾಲೋಚಿಸಿ ಅದನ್ನು ಕೈಬಿಡುವಂತೆ ಕಾರವಾರ ಸದಾಶಿವಗಡದ ನಾಗರೀಕರು ಕೇಳಿಕೊಂಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) .— ಅ) ಕಾಳೀ ನದಿಯ ಸೇತುವೆಯ ಮೇಲೆ ಹಾದು ಹೋಗುವ ವಾಹನಗಳ ಮೇಲೆ ಮಾತ್ರ ಶುಲ್ಕ ವಸೂಲಿ ಮಾಡಲಾಗುತ್ತಿದೆ ಪ್ರಶ್ನೆಯಲ್ಲಿ ಸೂಚಿಸಲಾಗಿರುವಂತೆ ತಲೆಗಂದಾಯವನ್ನು ಈ ಇಲಾಖೆ ವಸೂಲಿ ಮಾಡುತ್ತಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಈ ಇಲಾಖೆಗೆ ಸಂಬಂಧಿಸಿದುದಲ್ಲ.

ಈ) ಕಾರವಾರ ಸದಾಶಿವಗಡದ ನಾಗರೀಕರು ಕೇಳಿಕೊಂಡಿರುವುದು ಈ ಇಲಾಖೆಯ ಗಮನಕ್ಕೆ ಬಂದಿಲ್ಲ.

ವಿಷಯ : ಹೊನ್ನಾವರ ತಾಲ್ಲೂಕಿನ ಶರಾವತಿ ನದಿಯ ಎಡ ಮತ್ತು ಬಲ ದಂಡೆಯಲ್ಲಿ ನೀರಾವರಿ ಯೋಜನೆ

ಪ್ರಶ್ನೆ : 80 (616) ಶ್ರೀ ಆರ್. ಎನ್. ನಾಯ್ಕ (ಭಟ್ಕಳ) .— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೊನ್ನಾವರ ತಾಲ್ಲೂಕಿನ ಶರಾವತಿ ನದಿಯ ಎಡ ಬಲ ದಂಡೆಗಳಲ್ಲಿ ಏತ ನೀರಾವರಿ ಯೋಜನೆ ಕಾರ್ಯಗತಗೊಳಿಸುವುದರ ಬಗ್ಗೆ ಎಷ್ಟು ಕಡೆ ಸಮೀಕ್ಷಾ ಕೆಲಸ ನಡೆಸಿ ವರದಿ ಪಡೆಯಲಾಗಿದೆ;

ಆ) ಹೊನ್ನಾವರ ತಾಲ್ಲೂಕಿನ ಮಂಕಿ ಗ್ರಾಮಕ್ಕೆ ನೀರಾವರಿ ಸವಲತ್ತು ನೀಡುವುದರ ಬಗ್ಗೆ ಆ ಭಾಗದ ಶಾಸಕರಿಂದ ಬೇಡಿಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವಾಗ;

ಇ) ಆ ಬಗ್ಗೆ ಕೈಕೊಂಡ ಕ್ರಮವೇನು ?

ಉತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) .—

ಅ) ಸಮೀಕ್ಷೆಗಳು ಇನ್ನೂ ನಡೆಯುತ್ತಿವೆ;